# ಪುಟಾಣಿ ಹಣ್ಣುಗಳು

ಚಿತ್ರ ಬರಹ:
ಗಣಪತಿ ಬಾಳೆಗದ್ದೆ





ಕಾಡೆಂಬ ಹಸುರಿನ ಹಾದಿಯಲ್ಲಿ ಹೆಜ್ಜೆಯೂರುತ್ತ ಹೋದ ಹಾಗೆ ಅನೇಕ ವಿಚಿತ್ರಗಳು ಕಾಣಿಸಿಕೊಳ್ಳುತ್ತವೆ. ಯಾವುದನ್ನೋ ಹುಡುಕಿ ಹೋದ ನಮ್ಮನ್ನು ಮತ್ತಾವುದೋ ಅಡ್ಡಗಟ್ಟಿ ನಿಲ್ಲಿಸುತ್ತದೆ.

ನನಗೆ ಅಂದು ಹಾಗೇ ಆಯಿತು. ಗೌರಿಹೂವಿನ ಫೋಟೋ ತೆಗೆಯಲು ಹೋದವನಿಗೆ ಕಾಡು ಹಣ್ಣೊಂದು ಕೈ ಹಿಡಿದು ನಿಲ್ಲಿಸಿತು. ತನ್ನ ಅನುಪಮ ಚಲುವಿನಿಂದ ನನ್ನ ಕಂಗಳನ್ನು ತನ್ನತ್ತ ಸೆಳೆಯಿತು!

ತುಂಬ ಚಿಕ್ಕ ಚಿಕ್ಕ ಎಲೆಗಳ ಗಿಡವದು. ತನ್ನ ಹಸುರಿನ ನಡುವೆ ಅಲ್ಲಲ್ಲಿ ಕೆಂಜಿಗುರುಗಳನ್ನು ಚಿಗುರಿಸಿಕೊಂಡಿತ್ತು. ಅವುಗಳ ಮೇಲೆಲ್ಲ ಮಳೆಬಿಂದುಗಳು ಮುತ್ತುಗಳಾಗಿ ಉದುರಿಕೊಂಡಿದ್ದವು.

ಆದರೆ ನನ್ನನ್ನು ಹೆಚ್ಚು ಆಕರ್ಷಿಸಿದ್ದು ಅವುಗಳಲ್ಲ. ಅವುಗಳ ನಡುವೆ ಗಿಡದ ಸಪೂರ ಕಾಂಡದ ಮೇಲೆ ಅಲ್ಲಲ್ಲಿ ಬಲಿತು ನಿಂತಿದ್ದ ಹಣ್ಣುಗಳು. ಅವು ಗುಂಡುಗುಂಡಗೆ ಕೆಂಪಗಿದ್ದವು! ತಮ್ಮ ಸುತ್ತಲು ಹರಡಿದ ದಳದ ಮೇಲೆ ಕುಳಿತ ಪುಟಾಣಿ ಸೇಬುಹಣ್ಣಿನ ಹಾಗೆ ಕಾಣಿಸುತ್ತಿದ್ದವು!

ಮುಟ್ಟಿದರೆ ಗಟ್ಟಿ ಗಟ್ಟಿ! ಬಾಯಿಗಿಟ್ಟರೆ ರುಚಿ ಇಲ್ಲ. ಹಣ್ಣು ಬಿರಿದಾಗ ಕಪ್ಪು ಬೀಜ ನೆಲಕ್ಕೆ ಉದುರುತ್ತದೆ. ಒಣ ಕಡಲೆಯ ಗಾತ್ರದಲ್ಲಿರುವ ಹಣ್ಣುಗಳ ಸೌಂದರ್ಯ ಮಾತ್ರ ಅಗಾಧವಾದದ್ದು! ಗಿಡ ಯಾವ ಸಸ್ಯ ವರ್ಗಕ್ಕೆ ಸೇರಿದ್ದೋ ಗೊತ್ತಿಲ್ಲ. ಮೂರನೆಯ ಕಣ್ಣು ಕಂಡ ಈ ಹಣ್ಣುಗಳ ಬಗ್ಗೆ ಬಲ್ಲಿದರು ಬೆಳಕು ಚೆಲ್ಲಬಹುದೆ?